**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ- 244 /2023**

ಪಿ.ಡಬ್ಲ್ಯೂಃ- 4

ಸಿ.ಡಬ್ಲ್ಯೂಃ- 2

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಲಕ್ಷ್ಮಣ |
| ತಂದೆಯ ಹೆಸರುಃ | : | ತಿಮ್ಮೇಗೌಡ |
| ವಯಸ್ಸುಃ | : | 54 ವರ್ಷ |
| ವೃತ್ತಿಃ | : | ವ್ಯವಸಾಯ |
| ವಾಸಃ | : | ಚಿಟ್ಟನಹಳ್ಳಿ ಗ್ರಾಮ. |

**ದಿನಾಂಕಃ 25-07-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಚಾಸಾ-1 ಮತ್ತು ಆರೋಪಿ ಪರಿಚಯ ಇದೆ. ಅವರಿಬ್ಬರೂ ನಮ್ಮ ಮನೆಯಲ್ಲಿ ಬಾಡಿಗೆಗೆ ಇದ್ದರು. ಸುಮಾರು 7 ವರ್ಷಗಳ ಹಿಂದೆ ಚಾಸಾ-1 ಮತ್ತು ಆರೋಪಿ ನಮ್ಮ ಮನೆಯಲ್ಲಿ ಸುಮಾರು ಎರಡು ವರ್ಷಗಳ ಕಾಲ ಬಾಡಿಗೆಗೆ ಇದ್ದರು. ಪೊಲೀಸರು 4-5 ವರ್ಷಗಳ ಹಿಂದೆ ಅರಕಲಗೂಡು ಪೊಲೀಸ್ ಠಾಣೆಯಲ್ಲಿ ನಮ್ಮ ಮನೆಯಲ್ಲಿ ಬಾಡಿಗೆಗೆ ಇದ್ದ ವಿಚಾರಕ್ಕೆ ಸಂಬಂಧಿಸಿದಂತೆ ನನ್ನ ಸಹಿ ಪಡೆದಿರುತ್ತಾರೆ. ಪೊಲೀಸರು ನಮ್ಮ ಮನೆಯ ಬಳಿ ಪಂಚನಾಮೆ ಮಾಡಿರುವುದಿಲ್ಲ ಹಾಗೂ ನಾನು ಸಹಿ ಮಾಡಿದ ದಾಖಲೆಯಲ್ಲಿ ಪೊಲೀಸರು ಏನು ಬರೆದುಕೊಂಡಿದ್ದಾರೆಂದು ನನಗೆ ಗೊತ್ತಿಲ್ಲ.

ಸಾಕ್ಷಿಯು ಪಂಚನಾಮೆ ಮತ್ತು ಅದರ ಮೇಲಿರುವ ತನ್ನ ಸಹಿಯನ್ನು ನೆಜೋಡಿ ಗುರುತಿಸಿದ್ದು, ಪಂಚನಾಮೆಯನ್ನು ಈಗಾಗಲೇ ನಿಪಿ–7ಕ್ಕೆ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–7(ಬಿ)ಗೆ ಗುರುತಿಸಲಾಯಿತು, ಪೊಲೀಸರು ನನ್ನ ಹೇಳಿಕೆ ಪಡೆದಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಪಿಪಿ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

2. ದಿಃ27.07.2021 ರಂದು ಪೊಲೀಸರು ನಾನು ಚಾಸಾ–1 ಮತ್ತು ಆರೋಪಿಗೆ ಬಾಡಿಗೆ ನೀಡಿದ ಮನೆಯ ಬಳಿ ಬಂದು ಪಂಚನಾಮೆಯನ್ನು ನಿಪಿ–7 ರಂತೆ ಜರುಗಿಸಿ ನನ್ನ ಸಹಿ ಪಡೆದರು ಎಂದು ಸೂಚಿಸುವುದು ಸರಿಯಲ್ಲ. ಚಾಸಾ–1 ರವರು ಸದರಿ ಮನೆಯನ್ನು ತೋರಿಸಿ ಅದರಲ್ಲಿ 2014 ರಿಂದ 2018 ರವರೆಗೆ ನಾನು ಮತ್ತು ಆರೋಪಿ ಜೊತೆಯಲ್ಲಿ ಬಾಡಿಗೆ ಇದ್ದೆವು ಹಾಗೂ ಸದರಿ ಮನೆಯಲ್ಲಿ ನನ್ನನ್ನು ಆರೋಪಿ ಇರಿಸಿಕೊಂಡು ಮದುವೆಯಾಗವುಂದಾಗಿ ನಂಬಿಸಿ ನನ್ನೊಂದಿಗೆ ಲೈಂಗಿಕ ಸಂಪರ್ಕ ಹೊಂದಿರುತ್ತಾನೆಂದು ಹಾಗೂ ಕೊಲೆ ಬೆದರಿಕೆ ಹಾಕಿರುತ್ತಾನೆಂದು ತೋರಿಸಿದ ಸ್ಥಳ ಆಗಿರುತ್ತದೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ವಿಚಾರಕ್ಕೆ ಸಂಬಂಧಿಸಿದಂತೆ ದಿಃ27.07.2021 ರಂದು ಸ್ಥಳದಲ್ಲಿ ಪೊಲೀಸರು ನನ್ನನ್ನು ವಿಚಾರ ಮಾಡಿ ನಾನು ಮೇಲೆ ಹೇಳಿದಂತೆ ಹೇಳಿಕೆಯನ್ನು ಪಡೆದಿರುತ್ತಾರೆಂದು ಸೂಚಿಸುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ–14ಕ್ಕೆ ಗುರುತಿಸಲಾಯಿತು. ಆರೋಪಿತನಿಗೆ ಸಹಾಯ ಮಾಡುವ

ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ಪಾಟಿ ಸವಾಲು ಇರುವುದಿಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.